## ದಾಖಲೆಗಳ ಕಣ್ಣಾಮುಚ್ಚಾಲೆ!

ಸ್ವಚ್ಛ ಭಾರತ್ ಮಿಶನ್ ಜಾಲತಾಣದ ಡ್ಯಾಶ್‌ಬೋರ್ಡ್ ನೋಡಿ: (http://sbm.gov.in/sbmdashboard/default.aspx ) ೨೦೧೪ರ ಅಕ್ಟೋಬರ್ ನಂತರ ಅಂದರೆ ಮೋದಿ ಸರ್ಕಾರದ ಸ್ವಚ್ಛ ಭಾರತ್ ಮಿಶನ್ ಜಾರಿಯ ನಂತರ ಶೇಕಡಾವಾರು ಶೌಚಾಲಯಗಳ ಸಂಖ್ಯೆ ಹೆಚ್ಚಿತು ಎಂಬ ಅಂಕಿ ಅಂಶ ಮುಂದಿಡುತ್ತದೆ. ಅಕ್ಟೋಬರ್ ೨, ೨೦೧೪ರಲ್ಲಿ. ಶೇ. ೪೨ರಷ್ಟು ಕುಟುಂಬಗಳಿಗೆ ಶೌಚಾಲಯವಿತ್ತು, ಈಗ, ಈ ಸೆಪ್ಟೆಂಬರ್‌ಗೆ ಅದು ಶೇ. ೫೫ಕ್ಕೆ ಏರಿದೆ, ಅಂದರೆ ಶೇ. ೧೩ರಷ್ಟು ಹೆಚ್ಚಳವಾಗಿದೆ ಎಂದು. ದತ್ತಾಂಶಗಳನ್ನು ಹೇಗೆ ನಮಗೆ ಅನುಕೂಲವಾಗುವಂತೆ ಮಾರ್ಪಡಿಸಿ ಹೇಳಬಹುದು ಎನ್ನುವುದಕ್ಕೆ ಇದೇ ಸಾಕ್ಷಿ.

ಮೊದಲಿದ್ದ ಐಎಂಐಎಸ್ (ಇಂಟಗ್ರೇಟೆಡ್ ಮ್ಯಾನೇಜ್‌ಮೆಂಟ್ ಇನ್‌ಫಾರ್ಮೇಶನ್ ಸಿಸ್ಟಮ್) ವ್ಯವಸ್ಥೆಯನ್ನು ಈಗ ಇನ್ನಷ್ಟು ಉತ್ತಮಗೊಳಿಸಿ, ಪ್ರತಿಯೊಂದು ಶೌಚಾಲಯ ನಿರ್ಮಾಣಗೊಂಡು, ಫಲಾನುಭವಿಗೆ ಪ್ರೋತ್ಸಾಹಧನ ನೀಡಿದ ನಂತರ ಐಎಂಐಎಸ್‌ನಲ್ಲಿ ಅದನ್ನು ದಾಖಲಿಸಿ, ಶೌಚಾಲಯದ ಫೋಟೋ ತೆಗೆದು, ಅಕ್ಷಾಂಶ ಹಾಗೂ ರೇಖಾಂಶಗಳ ಜೊತೆ ಅಪ್‌ಲೋಡ್ ಮಾಡುವುದನ್ನು ಕಡ್ಡಾಯಗೊಳಿಸಿದೆ. ಕೇಂದ್ರ ಸರ್ಕಾರದ ಟಿಎಸ್‌ಸಿ ವೆಬ್‌ಸೈಟಿನಲ್ಲಿ ಐಎಂಐಎಸ್ ದತ್ತಾಂಶಗಳನ್ನು ೨೦೧೪ ಅಕ್ಟೋಬರ್ ನಂತರ ಎಲ್ಲ ರಾಜ್ಯ ಸರ್ಕಾರಗಳು ಅಪ್‌ಡೇಟ್ ಮಾಡುತ್ತಿವೆ. ಅಲ್ಲದೇ ೨೦೧೪ರಲ್ಲಿ ಅಕ್ಟೋಬರ್‌ಗಿಂತ ಮೊದಲೇ ಕಟ್ಟಿದ ಶೌಚಾಲಯಗಳಿಗೂ ಹಲವಾರು ತಾಂತ್ರಿಕ ಕಾರಣಗಳಿಂದಾಗಿ ಪ್ರೋತ್ಸಾಹಧನವನ್ನು ನಂತರ ಕೊಟ್ಟಿದ್ದರಿಂದ ಹೆಚ್ಚಿನ ಶೌಚಾಲಯಗಳ ವಿವರಗಳನ್ನು ಅಕ್ಟೋಬರ್ ನಂತರ ಅಪ್‌ಲೋಡ್ ಮಾಡಲಾಗಿದೆ.

ನಮ್ಮದೇ ರಾಜ್ಯದ ಉದಾಹರಣೆ ನೋಡೋಣ. ಏಪ್ರಿಲ್ ೨೦೧೪ರಿಂದ ಸೆಪ್ಟೆಂಬರ್ ೨೦೧೪ರವರೆಗೆ ನಿರ್ಮಾಣಗೊಂಡ ಶೌಚಾಲಯಗಳ ಸಂಖ್ಯೆ ಸೊನ್ನೆ! ಅಕ್ಟೋಬರ್ ೨೦೧೪ರಲ್ಲಿ ನಿರ್ಮಾಣಗೊಂಡ ಶೌಚಾಲಯಗಳು ಬರೋಬ್ಬರಿ ೨,೩೩,೬೬೬. ಇದರರ್ಥ ಪ್ರಧಾನಿಯವರು ಅಕ್ಟೋಬರ್‌ನಲ್ಲಿ ಉದ್ದ ಪೊರಕೆ ಹಿಡಿದು ದೆಹಲಿಯಲ್ಲಿ ಕಸ ಹೊಡೆದು, ಕರೆ ನೀಡಿದೊಡನೆ ನಮ್ಮ ರಾಜ್ಯದಲ್ಲಿಯೂ ಜನರು ಮತ್ತು ಸರ್ಕಾರ ಎಚ್ಚೆತ್ತು ಒಂದೇ ತಿಂಗಳಲ್ಲಿ ೨ ಲಕ್ಷಕ್ಕೂ ಹೆಚ್ಚು ಶೌಚಾಲಯ ಕಟ್ಟಿಸಿದರು ಎಂದಲ್ಲ! ಅಕ್ಟೋಬರ್‌ವರೆಗೆ ಐಎಂಐಎಸ್‌ನಲ್ಲಿ ದತ್ತಾಂಶಗಳನ್ನು 'ಅಪ್‌ಲೋಡ್' ಮಾಡಿರಲೇ ಇಲ್ಲ! ಆವರೆಗೆ ಎನ್‌ಬಿಎ ಅಡಿಯಲ್ಲಿ ಕಟ್ಟಿದ ಶೌಚಾಲಯಗಳಿಗೆ ಅಕ್ಟೋಬರ್‌ನಲ್ಲಿ ಪ್ರೋತ್ಸಾಹಧನ ಮಂಜೂರಾಗಿದ್ದರಿಂದ ಆಮೇಲೆ ದತ್ತಾಂಶಗಳನ್ನು ಅಪ್‌ಲೋಡ್ ಮಾಡಿದರು ಅಷ್ಟೆ.



ನವಿಲೇಹಾಳ್‌ನ ಒಂದು ದೃಶ್ಯ

ಎಲ್ಲಾ ಹಳ್ಳಿನು ಬಯಲು ಶೌಚ ಮುಕ್ತ ಮಾಡ್ರಿ ಅಂತ ದಿಲ್ಲಿಯಾಗ, ಬೆಂಗಳೂರಾಗ ಏಸಿ ಒಳಗ ಕುಂತವ್ರು ಹೇಳಿದ್ರ ಹೆಂಗ ಮಾಡೂದ್ರಿ ಮ್ಯಾಡಮ್... ಇಂತಾ ಮಂದಿ ಯಾವುದಕ್ಕೂ ಜಗ್ಗಂಗಿಲ್ಲ, ಚಂಬು ತಗಂಡೇ ಹೋಗ್ತಾರ, ನಮಗಂತೂ ಕೆಲಸನೆ ಸಾಕಾಗಿಬಿಟ್ಟೈತೆ' ಎಂದು ಪಂಚಾಯಿತಿ ಸೆಕ್ರೆಟರಿ ಅಲವತ್ತುಕೊಳ್ಳುತ್ತಾರೆ.

ಮಂಡ್ಯದ ಕೊಕ್ಕರೆ ಬೆಳ್ಳೂರಿನಲ್ಲಿ ಗುಡಿಸಲು ಮನೆಯಲ್ಲಿದ್ದ ಹೆಂಗಸಿನೊಂದಿಗೆ ಮಾತನಾಡುತ್ತಿದಾಗ, ಪ್ಯಾಂಟು ಶರ್ಟಿನಲ್ಲಿದ್ದ ವ್ಯಕ್ತಿಯೊಬ್ಬ ಬಂದ. ಆತ ಇವ್ರ ಗಂಡ ಎಂದು ಬಿಲ್ ಕಲೆಕ್ಟರ್ ನನಗೆ ಪರಿಚಯಿಸಿದ. ಆತನಿಗೆ ಟಾಯ್ಲೆಟ್ ಕಟ್ಟಿಸದೇ ಇರೋದಕ್ಕೆ ದುಡ್ಡಿನ ಕೊರತೆ ಕಾರಣವಾ ಎಂದು ಕೇಳಿದೆ. ಆತ 'ಹಂಗೇನಿಲ್ಲ, ದುಡ್ಡು ಹೊಂದಿಸಬೌದು. ನಾ ಬೆಂಗಳೂರಲ್ಲಿ ಟ್ಯಾಕ್ಸಿ ಡ್ರೈವರ್, ಊರಿಗೆ ಬರಾದೆ ತಿಂಗಳಿಗೆ ಒಂದ್ ದಪ ಅಥ್ವಾ ಎರಡು ದಪ. ನನಗೆ ಟೈಮೆಲ್ಲಿರುತ್ತೆ? ಈ ಕಡೆ ಇಷ್ಟಕೊಂದು ಜಾಗೈತಲ್ಲ, ಹೆಂಗಸ್ರು ಹೋಗ್ತಾರೆ' ಎಂದು ಮನೆಯ ಎಡಭಾಗಕ್ಕೆ ದೂರದಲ್ಲಿ ಖಾಲಿ ಹೊಲಗಳಿರುವುದನ್ನು ತೋರಿಸಿದ. ಹೆಂಗಸರಿಗೆ ಚೊಂಬು ತಗಂಡು ಹೋಗುವುದು ಹಿಂಸೆ, ಮುಜುಗರ, ಭಯ, ಕಷ್ಟವಾದರೆ ಬಹುಪಾಲು ಗಂಡಸರಿಗೆ ಶೌಚಾಲಯ ಆದ್ಯತೆಯೂ ಅಲ್ಲ, ಅಗತ್ಯವೂ ಅಲ್ಲ. ಹೀಗಾಗಿ ಶೌಚಾಲಯ ಕಟ್ಟಲು ಆರ್ಥಿಕ ಸಮಸ್ಯೆಗಳಿಲ್ಲದ್ದಿದ್ದರೂ, ಹಲವಾರು ಸಾಂಸ್ಕೃತಿಕ, ಸಾಮಾಜಿಕ ಕಾರಣಗಳು ಚೊಂಬು ತೆಗೆದುಕೊಂಡು ಹೋಗುವಂತೆ ಮಾಡುತ್ತಿವೆ.



### ಮೊದಲು ದುಡ್ಡು ಹಾಕಬೇಕಲ್ಲ..

ಶೌಚಾಲಯ ಕಟ್ಟಲು ಸರ್ಕಾರವೇನೋ ಪ್ರೋತ್ಸಾಹಧನ ಕೊಡುತ್ತೆ ನಿಜ, ಆದರೆ ಮೊದಲು ದುಡ್ಡು ಹಾಕಬೇಕಲ್ಲ? ಶೌಚಾಲಯ ಕಟ್ಟಲು ಸಾಲಸೋಲ